# ರಾಜ್ಯ ಶಾಸ್ತ್ರ
# ಅಧ್ಯಾಯ-01
# ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

## I ಒಂದು ಅಂಕದ ಪ್ರಶ್ನೋತ್ತರಗಳು

1. ಕೋಮುವಾದ ಎಂದರೇನು?

   ಒಂದು ಧರ್ಮದ ಬಗೆಗಿನ ಅತಿಯಾದ ಸ್ಯೆರಣೆಯೇ ಕೋಮುವಾದ

## II ಎರಡು ಅಂಕದ ಪ್ರಶ್ನೋತ್ತರಗಳು

1. ಕೋಮುವಾದವು ದೇಶದ ಐಕ್ಯತೆಗೆ ಮಾರಕ. ಹೇಗೆ?
   - ಇದು ಸಾಮಾಜಿಕ ಭಿನ್ನತೆ ಹಾಗೂ ಅಪನಂಬಿಕೆಗಳನ್ನು ಹೆಚ್ಚಿಸುತ್ತದೆ
   - ಸಮಾಜದಲ್ಲಿ ಗುಂಪುಗಾರಿಕೆಯನ್ನು ಹೆಚ್ಚಿಸುತ್ತದೆ
   - ಜೀವ ಹಾಗೂ ಆಸ್ತಿಹಾನಿಗೆ ಕಾರಣವಾಗುತ್ತದೆ
   - ರಾಷ್ಟೀಯ ಏಕತೆ ಹಾಗೂ ಸಮಗ್ರತೆಗೆ ಧಕ್ಕೆ ತರುತ್ತದೆ
2. ಕೋಮುವಾದವನ್ನು ಹೇಗೆ ಹೊಗಲಾಡಿಸಬಹುದು ?
   - ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು
   - ಸದೃಢ ರಾಷ್ಟ್ರೀಯ ಮನೋಭಾವನೆ
   - ಆರೋಗ್ಯಕರ ಸುದ್ಧಿಮಾಧ್ಯಮ
   - ಜಾತ್ಯತೀತ ಮನೋಭಾವನೆಗೆ ಒತ್ತು
3. ಮಹಿಳೆಯರ ಸ್ಥಾನಮಾನ ಸುಧಾರಿಸುವ ಉಪಾಯಗಳಾವುವು?
   - ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಲಪಡಿಸುವಿಕೆ
   - ಮಹಿಳಾ ಸ್ವ ಸಹಾಯ ಗುಂಪುಗಳು
   - ಉಚಿತ ಹಾಗೂ ಕಡ್ಡಾಯ ಶಿಕ್ಷಣ
   - ಬಾಲ್ಯ ವಿವಾಹ,ವರದಕ್ಷಿಣೆಗಳ ನಿರ್ಮೂಲನೆ
4. ನಿರುದ್ಯೋಗ ನಿವಾರಣೆಗೆ ಕೈಗೊಂಡ ಕ್ರಮಗಳಾವುವು?
   - ಜನಸಂಖ್ಯಾ ನಿಯಂತ್ರಣ,
   - ಕೃಷಿ ಅಭಿವೃದ್ದಿ,
   - ಪಂಚವಾರ್ಷಿಕ ಯೋಜನೆಗಳು,
   - ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ,
   - ಉದ್ಯೋಗ ಖಾತರಿ ಯೋಜನೆಗಳು
5. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೈಗೊಂಡ ಕ್ರಮಗಳಾವುವು?
   - ಡಿ. ಎಂ. ನಂಜುಂಡಪ್ಪ ಸಮಿತಿಯ ರಚನೆ
   - ಸಂವಿಧಾನದ 371 (ಜೆ) ವಿಧಿಯನ್ವಯ ಹೈದರಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಲಾಗಿದೆ
   - ಮಲೆನಾಡು ಅಭಿವೃದ್ಧಿ ಪ್ರಾಧಿಕಾರದ ರಚನೆ
   - ಹೈದರಬಾದ್ ಕರ್ನಾಟಕ ಅಭಿವೃದ್ದಿ ಸಮಿತಿಯ ರಚನೆ
6. ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳಾವುವು?
   - ಜನರಲ್ಲಿ ಭೀತಿಯನ್ನು ಉಂಟುಮಾಡುತ್ತದೆ

- ಆಸ್ತಿ ಹಾಗೂ ಪ್ರಾಣಹಾನಿಗೆ ಕಾರಣವಾಗುತ್ತದೆ
- ಸರ್ಕಾರದ ಆಡಳಿತದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ
- ಜಾಗತಿಕ ವಿನಾಶಕ್ಕೆ ಕಾರಣವಾಗುತ್ತದೆ

7. ಭಯೋತ್ಪಾದಕತೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವುವು?
    - ಗಡಿ ಗಸ್ತನ್ನು ಬಿಗಿಗೊಳಿಸುವುದು
    - ಭಯೋತ್ಪಾದಕ ನಿಗ್ರಹದಳದ ರಚನೆ
    - ಅವಶ್ಯಕ ಸಂಧರ್ಭದಲ್ಲಿ ಸೇನಾಪಡೆಗಳ ಬಳಕೆ
    - ಆಧುನಿಕ ತಂತ್ರಜ್ಞಾನದ ಬಳಕೆ
8. ಕಾರ್ಪೋರೇಟ್ ತಂತ್ರಗಾರಿಕೆ ಎಂದರೇನು? ಅದರ ಪ್ರಸ್ತುತ ಬೆಳವಣಿಗೆಯನ್ನು ಕುರಿತು ಬರೆಯಿರಿ
    ಒಂದು ನಿರ್ದಿಷ್ಟ ಉದ್ಧೇಶದೊಂದಿಗೆ ಪೂರ್ವ ನಿರ್ಧರಿತ ಗುರಿಗಳನ್ನು ತಲುಪಲು ಕಂಪನಿಯು ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾರ್ಪೋರೇಟ್ ತಂತ್ರಗಾರಿಕೆ ಎನ್ನುವರು.
    ಇದರ ಪ್ರಸ್ತುತ ಬೆಳವಣಿಗೆಯು ಈ ಮುಂದಿನಂತಿದೆ
    - ಕಂಪನಿಯ ಲಾಭ ಹೆಚ್ಚಿಸುವುದೇ ಇದರ ಮುಖ್ಯ ಉದ್ಧೇಶವಾಗಿದೆ
    - ಇದು ಪ್ರಜೆಗಳು, ಸಮಾಜ ಹಾಗೂ ದೇಶದ ಮೇಲೆ ನಕರಾತ್ಮಕ ಪರಿಣಾಮವನ್ನು ಬೀರುತ್ತದೆ
    - ಸಾಮಾಜಿಕ ಹೊಣೆಗಾರಿಕಾ ಯೋಜನೆಗಳ ಮೂಲಕ ಸಾಕಷ್ಟು ಸಮಾಜ ಸೇವೆ ಮಾಡುತ್ತಿವೆ

## ಅಧ್ಯಾಯ-02
## ಭಾರತದ ವಿದೇಶಾಂಗ ನೀತಿ

**I ಖಾಲಿ ಬಿಟ್ಟಿರುವ ಸ್ಥಳಗಳನ್ನು ಭರ್ತಿಮಾಡಿರಿ**

1. ಭಾರತದ ವಿದೇಶಾಂಗ ನೀತಿಯನ್ನು ವಿಶೇಷವಾಗಿ ನಿರೂಪಿಸಿದವರು **ಜವಾಹರ್ ಲಾಲ್ ನೆಹರು**
2. ವಿಶ್ವದ ಯಾವುದೇ ಬಣಕ್ಕೂ ಸೇರದೇ ಇರುವ ನೀತಿಯನ್ನು **ಅಲಿಪ್ತ ನೀತಿ** ಎನ್ನುವರು
3. ಭಾರತವು ಸ್ವಾತಂತ್ರಪೂರ್ವದಲ್ಲಿ **ಬ್ರಿಟಿಷರ** ವಸಾಹತು ಶಾಹಿಗೆ ಒಳಗಾಗಿತ್ತು

**II ಮೂರು ಅಂಕದ ಪ್ರಶ್ನೋತ್ತರಗಳು**

1. ಭಾರತದ ವಿದೇಶಾಂಗ ನೀತಿಯ ಪ್ರಮುಖ ಗುರಿಗಳಾವುವು?
    - ರಾಷ್ಟ್ರದ ಭದ್ರತೆ
    - ರಾಷ್ಟ್ರದ ಆರ್ಥಿಕ ಸಂವರ್ಧನೆ
    - ಸಾಂಸ್ಕೃತಿಕ ಮೌಲ್ಯಗಳ ಪ್ರಸಾರ
    - ಮಿತ್ರರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ಶತ್ರುರಾಷ್ಟ್ರಗಳ ನಿರ್ಬಂಧ
    - ವಿಶ್ವಶಾಂತಿ ಮತ್ತು ಸಹಬಾಳ್ವೆ ಸಾಧಿಸುವುದು
2. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾವುವು ?
    - ಪಂಚಶೀಲ ತತ್ವಗಳು
    - ವಸಾಹತುಶಾಹಿಗೆ ವಿರೊಧ

- ವರ್ಣಭೇದ ನೀತಿಗೆ ವಿರೋಧ
- ಅಲಿಪ್ತ ನೀತಿ
- ನಿಶಸ್ತ್ರೀಕರಣ

3. ಪಂಚಶೀಲ ತತ್ವಗಳನ್ನು ಪಟ್ಟಿಮಾಡಿ
- ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ
- ಪರಸ್ಪರ ಆಕ್ರಮಣ ಮಾಡದಿರುವುದು
- ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು
- ಪರಸ್ಪರ ಸಹಕಾರ ಮತ್ತು ಸಮಾನತೆ
- ಶಾಂತಿಯುತ ಸಹಬಾಳ್ವೆ

4. ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ? ವಿವರಿಸಿ
- ಇದು ಶಸ್ತ್ರಾಸ್ತ್ರ ಪೈಪೋಟಿಯನ್ನು ತಗ್ಗಿಸುತ್ತದೆ
- ಯುದ್ಧದ ಸಂಭವನೀಯತೆಯು ಕುಗ್ಗುತ್ತದೆ
- ಶಸ್ತ್ರಾಸ್ತ್ರ ಉತ್ಪಾದನೆಯನ್ನು ನಿಯಂತ್ರಿಸುತ್ತದೆ
- ವಿಶ್ವಶಾಂತಿ ನೆಲೆಸುತ್ತದೆ
- ಮೂರನೇ ಮಹಾಯುದ್ಧದ ಭೀತಿಯನ್ನು ದೂರಮಾಡಲು ಅಗತ್ಯ
- ಅಣ್ವಸ್ತ್ರಗಳ ಬಳಕೆಯ ಭೀತಿಯನ್ನು ಹೋಗಲಾಡಿಸಲು ಸಹಾಯಕ

5. ವಿದೇಶಾಂಗ ನೀತಿಯು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿ ಹೇಗೆ ?
- ಇದರಿಂದ ದೇಶಗಳ ನಡುವೆ ಉತ್ತಮ ಬಾಂಧವ್ಯ ನೆಲೆಸುತ್ತದೆ
- ವಿದೇಶ ವ್ಯಾಪಾರ ಉತ್ತಮಗೊಳ್ಳುತ್ತದೆ
- ಕೊರತೆಯಲ್ಲಿರುವ ಸಂಪನ್ಮೂಲಗಳ ಎರವಲು ಪಡೆಯಲು ಸಹಕಾರಿ
- ಬಂಡವಾಳ ಸಂಚಯನಕ್ಕೆ ಸಹಕಾರಿ
- ತಂತ್ರಜ್ಞಾನ ವಿನಿಮಯಕ್ಕೆ ಅವಕಾಶ ಸಿಗುತ್ತದೆ
- ಹಣಕಾಸಿನ ನೆರವು ಪಡೆಯಲು ಸಹಕಾರಿ

6. ವಸಾಹತುಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?
- ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದು
- ಇದು ಆಕ್ರಮಣಕಾರಿ ಪ್ರವೃತ್ತಿಯನ್ನು ಪ್ರದರ್ಶಿಸುತ್ತದೆ
- ಒಂದು ದೇಶದ ಸಾರ್ವಭೌಮತ್ವಕ್ಕೆ ತೊಡಕಾಗಿದೆ
- ದೇಶದ ಸಂಪನ್ಮೂಲಗಳ ಲೂಟಿಗೆ ಅವಕಾಶ ನೀಡುತ್ತದೆ
- ಮಾನವ ಹಕ್ಕುಗಳ ಉಲ್ಲಂಘನೆಗೂ ಕಾರಣವಾಗಿದೆ
- ಭಾರತವು ಬ್ರಿಟನ್ನಿನ ವಸಾಹತುವಾಗಿ ಸಾಕಷ್ಟು ತೊಂದರೆಗೊಳಗಾಗಿದೆ

7. ವಿದೇಶಾಂಗ ನೀತಿ ಎಂದರೇನು ?

   ಒಂದು ದೇಶವು ಮತ್ತೊಂದು ದೇಶದೊಂದಿಗೆ ವ್ಯವಹರಿಸಲು ಅನುಸರಿಸುವ ನೀತಿಯೇ ವಿದೇಶಾಂಗ ನೀತಿ

# ಅಧ್ಯಾಯ-03,
# ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

**I ಖಾಲಿ ಬಿಟ್ಟಿರುವ ಸ್ಥಳಗಳನ್ನು ಭರ್ತಿಮಾಡಿರಿ**

1. ಪಂಚಶೀಲ ತತ್ವಗಳ ಮೂಲಕ **ಚೀನಾ** ರಾಷ್ಟ್ರದೊಂದಿಗೆ ಸಂಬಂಧ ವೃದ್ಧಿಸಲಾಯಿತು
2. ಅಂತರರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ಧತೆಯ ಕುರಿತು ನಮ್ಮ ಸಂವಿಧಾನದ **51**ನೇ ವಿಧಿಯಲ್ಲಿ ತಿಳಿಸಲಾಗಿದೆ
3. 1962ರಲ್ಲಿ **ಚೀನಾ** ದೇಶವು ಭಾರತದ ಮೇಲೆ ಆಕ್ರಮಣ ಮಾಡಿತು

**II ಒಂದು ಅಂಕದ ಪ್ರಶ್ನೋತ್ತರಗಳು**

1. ಭಾರತ ಮತ್ತು ಪಾಕಿಸ್ತಾನ ನಡುವಿನ ಬಿಕ್ಕಟ್ಟಿಗೆ ಪ್ರಮುಖ ಕಾರಣವೇನು?
   ಕಾಶ್ಮೀರ ಸಮಸ್ಯೆ
2. ಇತ್ತೀಚಿಗೆ ಭಾರತ ಹಾಗೂ ಚೀನಾಗಳ ನಡುವಿನ ಸಂಬಂಧದ ಮೇಲೆ ಕೆಟ್ಟ ಪ್ರಭಾವ ಬೀರಿರುವ ಅಂಶ ಯಾವುದು ?
   ಚೀನಾ ಅರುಣಾಚಲ ಪ್ರದೇಶ ರಾಜ್ಯವನ್ನು ತನ್ನದೆಂದು ಪ್ರತಿಪಾದಿಸುತ್ತಿರುವುದು
3. 1971 ರ ಭಾರತ-ಪಾಕಿಸ್ತಾನ ಯುದ್ಧದ ಪರಿಣಾಮವೇನು ?
   ಬಾಂಗ್ಲಾದೇಶದ ಉದಯ
4. 1966 ರ ಭಾರತ-ಪಾಕಿಸ್ತಾನಗಳ ನಡುವಿನ ತಾಷ್ಕೆಂಟ್ ಒಪ್ಪಂದದ ಮಧ್ಯಸ್ಥಿಕೆ ವಹಿಸಿದ್ದ ದೇಶ ಯಾವುದು?
   ರಷ್ಯಾ ದೇಶ
5. 1961 ರ ಗೋವಾ ವಿಮೋಚನೆಯಲ್ಲಿ ಭಾರತಕ್ಕೆ ನೆರವು ನೀಡಿದ್ಧ ದೇಶ ಯಾವುದು?
   ರಷ್ಯಾ ದೇಶ

**III ಮೂರು ಅಂಕದ ಪ್ರಶ್ನೋತ್ತರಗಳು**

1. ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂದವ್ಯ ಅವಶ್ಯಕ ಏಕೆ?
   ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂದವ್ಯ ಅವಶ್ಯಕ ಏಕೆಂದರೆ
   - ಇದರಿಂದ ದೇಶಗಳ ನಡುವೆ ಉತ್ತಮ ಬಾಂಧವ್ಯ ನೆಲೆಸುತ್ತದೆ
   - ವಿದೇಶ ವ್ಯಾಪಾರ ಉತ್ತಮಗೊಳ್ಳುತ್ತದೆ
   - ಕೊರತೆಯಲ್ಲಿರುವ ಸಂಪನ್ಮೂಲಗಳ ಎರವಲು ಪಡೆಯಲು ಸಹಕಾರಿ
   - ಬಂಡವಾಳ ಸಂಚಯನಕ್ಕೆ ಸಹಕಾರಿ
   - ತಂತ್ರಜ್ಞಾನ ವಿನಿಮಯಕ್ಕೆ ಅವಕಾಶ ಸಿಗುತ್ತದೆ
   - ಹಣಕಾಸಿನ ನೆರವು ಪಡೆಯಲು ಸಹಕಾರಿ
2. ಭಾರತ-ಪಾಕಿಸ್ತಾನಗಳ ನಡುವಿನ ಸಂಬಂದ ಹದಗೆಡಲು ಕಾರಣಗಳೇನು?
   - ಕಾಶ್ಮೀರ ಸಮಸ್ಯೆ
   - ಇತ್ಯರ್ಥವಾಗದ ಜಲವಿವಾದಗಳು
   - ಪಾಕ್ ಪ್ರಾಯೋಜಿತ ಭಯೋತ್ಪಾದನೆ
   - ಪಾಕಿಸ್ತಾನ-ಚೀನಾಗಳ ನಡುವಿನ ಮೈತ್ರಿ
   - ಪಾಕಿಸ್ತಾನದ ಮಿಲಿಟರಿಶಾಹಿತ್ವ ಹಾಗೂ ರಾಜಕೀಯ ಅಸ್ಥಿರತೆ
   - ಪಾಕ್ ಪ್ರಾಯೋಜಿತ ಅಕ್ರಮ ನುಸುಳುವಿಕೆ
3. ಇತ್ತೀಚೀನ ದಿನಗಳಲ್ಲಿ ಭಾರತ-ಚೀನಾಗಳ ನಡುವಿನ ಸಂಬಂದ ಹದಗೆಡಲು ಕಾರಣಗಳೇನು?
   - ಭಾರತದ ಟಿಬೆಟ್ ಬಗೆಗಿನ ನಿಲುವು
   - ಚೀನಾದ ಮಾವೋವಾದಿಗಳಿಂದ ಭಾರತದಲ್ಲಿ ನಕ್ಸಲ್‌ವಾದದ ಚಟುವಟಿಕೆಗಳು

- ಚೀನಾ ಹಾಗೂ ಪಾಕ್ ಮೈತ್ರಿ
- ಅರುಣಾಚಲ ಪ್ರದೇಶದ ಬಗ್ಗೆ ಚೀನಾದ ಧೋರಣೆಗಳು
- ಇತ್ಯರ್ಥವಾಗದಿರುವ ಗಡಿ ವಿವಾದಗಳು
- ರಾಜತಾಂತ್ರಿಕ ಮಾತುಕತೆಗಳಲ್ಲಿನ ಬದ್ಧತೆಯ ಕೊರತೆ

4. ಭಾರತ ಹಾಗೂ ಅಮೇರಿಕಾಗಳ ನಡುವಿನ ಸಂಬಂಧವನ್ನು ಕುರಿತು ಬರೆಯಿರಿ
    - ಎರಡು ದೇಶಗಳು ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿವೆ
    - 1962 ರ ಭಾರತ-ಚೀನಾ ಯುದ್ಧದಲ್ಲಿ ಅಮೇರಿಕಾ ನೆರವು ನೀಡಿದೆ
    - ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಸಮಾನ ಹಿತಾಸಕ್ತಿ ಹೊಂದಿವೆ
    - ಬಾಹ್ಯಾಕಾಶ, ರಕ್ಷಣೆ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಕಾರ ಸಾಧಿಸಿವೆ
    - ಪಂಚವಾರ್ಷಿಕ ಯೋಜನೆಗಳಿಗೆ ನೆರವು ನೆಡುತ್ತಿದೆ
    - ಭಾರತ ಪಾಕಿಸ್ಥಾನ ಯುದ್ಧದಲ್ಲಿ ನೆರವು ನೀಡಿದೆ
5. ಭಾರತ ಹಾಗೂ ರಷ್ಯಾಗಳ ನಡುವಿನ ಸಂಬಂಧವನ್ನು ಕುರಿತು ಬರೆಯಿರಿ
    - ಪ್ರಾರಂಭದಿಂದಲೂ ಭಾರತ-ರಷ್ಯಾಗಳ ನಡುವಿನ ಸಂಬಂಧ ಉತ್ತಮವಾಗಿದೆ
    - ಭಾರತದ ಆರ್ಥಿಕ ಹಾಗೂ ಎಲ್ಲಾ ಯೊಜನೆಗಳಿಗೆ ರಷ್ಯಾ ಸಹಕರಿಸುತ್ತಿದೆ
    - 1961 ರ ಗೋವಾ ವಿಮೋಚನೆಯಲ್ಲಿ ಸಹಕಾರ ನೀಡಿದೆ
    - 1966 ರಲ್ಲಿ ತಾಷ್ಕೆಂಟ್ ಒಪ್ಪಂದದ ಮೂಲಕ ಭಾರತ-ಪಾಕ್ ಮಧ್ಯೆ ಕದನ ವಿರಾಮ ಸ್ಥಾಪಿಸಿತು
    - 1971 ರಲ್ಲಿ 20 ವರ್ಷಗಳ ಶಾಂತಿ-ಸಹಕಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ
    - ಭಿಲಾಯ್, ಬೋಕಾರೋಗಳ ಉಕ್ಕಿನ ಘಟಕಗಳು ರಷ್ಯಾದ ನೆರವಿನಿಂದ ಸ್ಥಾಪಿಸಲ್ಪಟ್ಟಿವೆ
    - ವಿಶ್ವಸಂಸ್ಥೆಯಲ್ಲಿ ಭಾರತಕ್ಕೆ ಶಾಶ್ವತ ಸದಸ್ಯತ್ವ ಒದಗಿಸಲು ರಷ್ಯಾ ಸಹಕರಿಸುತ್ತಿದೆ
    - ಪಂಚವಾರ್ಷಿಕ ಯೋಜನೆಗಳು ರಷ್ಯಾದಿಂದ ಎರವಲು ಪಡೆದವುಗಳಾಗಿವೆ

## ಅಧ್ಯಾಯ-04
## ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

**I ಖಾಲಿ ಬಿಟ್ಟಿರುವ ಸ್ಥಳಗಳನ್ನು ಭರ್ತಿಮಾಡಿರಿ**

1. ಮಾನವ ಹಕ್ಕುಗಳ ದಿನವನ್ನು **<u>ಡಿಸೆಂಬರ್ 10</u>** ರಂದು ಆಚರಿಸುತ್ತೇವೆ
2. ಭಾರತವು ನಿರಂತರವಾಗಿ **<u>ಸಾರ್ವತ್ರಿಕ</u>** ಮಾನವ ಹಕ್ಕುಗಳನ್ನು ಪ್ರತಿಪಾದಿಸುತ್ತಾ ಬಂದಿದೆ
3. ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೊರಾಡಿದವರು **<u>ನೆಲ್ಸನ್ ಮಂಡೆಲಾ</u>**
4. ಮಾನವ ಹಕ್ಕು ಎಂಬುದು ______ ಸಮಾನತೆಯನ್ನು ಹೊಂದಿದೆ

**II ಎರಡು ಅಂಕದ ಪ್ರಶ್ನೋತ್ತರಗಳು**

1. ದ್ವಿತೀಯ ಮಹಾಯುದ್ಧದ ನಂತರ ಜಗತ್ತು ಎದುರಿಸಿದ ಸಮಸ್ಯೆಗಳಾವುವು ?
    - ಮಾನವ ಹಕ್ಕುಗಳ ನಿರಾಕರಣೆ
    - ಶಸ್ತ್ರಾಸ್ತ್ರ ಪೈಪೋಟಿ
    - ಆರ್ಥಿಕ ಅಸಮಾನತೆ

- ವರ್ಣಭೇದ ನೀತಿ
- ಭಯೋತ್ಪಾದನೆ

2. ಮಾನವ ಹಕ್ಕುಗಳ ಪ್ರತಿಪಾದನೆಗೆ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ
   - ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರವಾಗಿ ಪ್ರತಿಪಾದಿಸುತ್ತಿದೆ
   - ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ
   - ಜಾಗತಿಕ ವೇದಿಕೆಗಳ ಮೂಲಕ ಮಾನವ ಹಕ್ಕುಗಳ ಸಂರಕ್ಷಣೆಗೆ ಪ್ರಯತ್ನಿಸುತ್ತಿದೆ
   - ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾನವ ಹಕ್ಕುಗಳ ಸಂರಕ್ಷಣೆಯ ಸಮರ್ಥನೆಗೆ ವಾದ ಮಂಡಿಸಿದೆ
3. ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವುವು?
   - ಮೂರನೇ ಮಹಾಯುದ್ಧ ಸಂಭವಿಸಬಹುದು
   - ಭಯ, ಅಸ್ಥಿರತೆಗಳು ಉಂಟಾಗುತ್ತವೆ
   - ಮನುಕುಲದ ನಾಶಕ್ಕೆ ಕಾರಣವಾಗುತ್ತದೆ
   - ವಿಶ್ವಶಾಂತಿಗೆ ಭಂಗ ತರುತ್ತದೆ
4. ಆರ್ಥಿಕವಾಗಿ ಹಿಂದುಳಿದ ದೇಶಗಳ ಲಕ್ಷಣಗಳಾವುವು? ಈ ರೀತಿಯ ಹಿಂದುಳಿಯುವಿಕೆಗೆ ಕಾರಣಗಳಾವುವು?
   **ಆರ್ಥಿಕವಾಗಿ ಹಿಂದುಳಿದ ದೇಶಗಳ ಲಕ್ಷಣಗಳು**
   - ತಲಾ ವರಮಾನ ಕಡಿಮೆ ಇರುತ್ತದೆ
   - ಕೃಷಿ, ಕೈಗಾರಿಕೆಗಳು ಹಿಂದುಳಿದಿರುತ್ತವೆ

   **ಹಿಂದುಳಿಯುವಿಕೆಗೆ ಕಾರಣಗಳು**
   - ವಸಾಹತುಶಾಹಿತ್ವ
   - ಸಾಮ್ರಾಜ್ಯಶಾಹಿತ್ವ
5. ಆರ್ಥಿಕ ಅಸಮಾನತೆ ನಿವಾರಣೆಗಾಗಿ ಭಾರತ ಕೈಗೊಂಡಿರುವ ಸುಧಾರಣಾ ಕ್ರಮಗಳಾವುವು?
   - ಬಡದೇಶಗಳಿಗೆ ಆರ್ಥಿಕ ನೆರವು ನೀಡುವುದು
   - ಶ್ರೀಮಂತ ದೇಶಗಳು ಬಂಡವಾಳ ತೊಡಗಿಸಲು ಪ್ರೇರಣೆ ನೀಡುವುದು
6. ಶಸ್ತ್ರಾಸ್ತ್ರ ಪೈಪೋಟಿ ಕುರಿತಂತೆ 'ಐಸೆನೆ ಹೊವರ್' ರವರ ಉದ್ಗಾರವೇನು ?
   **"ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ, ಬದಲಾಗಿ ಕಾರ್ಮಿಕರ ಶ್ರಮವನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ"**
7. 'ವರ್ಣಭೇದ ನೀತಿಯು ಮಾನವತಾವಾದಕ್ಕೆ ವಿರುದ್ಧವಾಗಿದೆ' ಇದನ್ನು ನಿಮ್ಮ ದೃಷ್ಟಿಕೋನದಲ್ಲಿ ಸಮರ್ಥಿಸಿ
   - ದೇಹದ ಬಣ್ಣದ ಆಧಾರದ ಮೇಲೆ ತಾರತಮ್ಯ ಮಾಡುತ್ತದೆ
   - ಕರಿಯರಿಗೆ ನಾಗರೀಕ ಹಕ್ಕುಗಳನ್ನು ನಿರಾಕರಿಸಿದೆ
   - ಕಪ್ಪು ಜನರ ಆರ್ಥಿಕ ಹಿಂದುಳಿಕೆಗೆ ಕಾರಣವಾಗಿದೆ
   - ಸಮಾನತೆಯ ತತ್ವಕ್ಕೆ ವಿರುದ್ಧವಾಗಿದೆ

# ಅಧ್ಯಾಯ-05
## ಜಾಗತಿಕ ಸಂಸ್ಥೆಗಳು

**I ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ವಿಶ್ವಸಂಸ್ಥೆಯು ಸ್ಥಾಪನೆಯಾದ ವರ್ಷ **24ನೇ ಅಕ್ಟೋಬರ್ 1945**
2. ವಿಶ್ವಸಂಸ್ಥೆಯ ಮುಖ್ಯ ಕಛೇರಿ **ನ್ಯೂಯಾರ್ಕ** ನಗರದಲ್ಲಿದೆ
3. ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವಮಾದರಿಯಲ್ಲಿರುವ ಅಂಗಸಂಸ್ಥೆ **ಭದ್ರತಾ ಸಮಿತಿ**
4. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾದೀಶರ ಅವಧಿ **9** ವರ್ಷ
5. ಅಂತರರಾಷ್ಟ್ರೀಯ ನ್ಯಾಯಾಲಯದವು **ನೆದರ್‌ಲ್ಯಾಂಡಿನ ಹೇಗ್ ನಗರ** ಎಂಬಲ್ಲಿ ಇದೆ
6. ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿ ಹೆಸರು **ಆಂಟೋನಿಯೊ ಗುಟಾರೆಸ್**
7. ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಯಾದ ವರ್ಷ **1948**
8. ಸಾಕ್ ಸ್ಥಾಪನೆಯಾದ ವರ್ಷ **1985**

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ವಿಸ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರ ಹೆಸರುಗಳಾವುವು?
   - ಇಂಗ್ಲೇಂಡಿನ ವಿನ್‌ಸ್ಟನ್ ಚರ್ಚಿಲ್
   - ರಷ್ಯಾದ ಜೋಸೆಫ್ ಸ್ಟಾಲಿನ್
   - ಅಮೇರಿಕಾದ ಫ್ರಾಂಕ್ಲಿನ್-ಡಿ-ರೂಸ್‌ವೆಲ್ಟ್
2. ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳಾವುವು?
   - ಸಾಮಾನ್ಯ ಸಭೆ
   - ಭದ್ರತಾ ಸಮಿತಿ
   - ಆರ್ಥಿಕ ಮತ್ತು ಸಾಮಾಜಿಕ ಸಮಿತಿ
   - ವಿಶ್ವಸ್ಥ ಸಮಿತಿ
   - ಸಚಿವಾಲಯ
   - ಅಂತರರಾಷ್ಟ್ರೀಯ ನ್ಯಾಯಾಲಯ
3. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಖಾಯಂ ಸದಸ್ಯತ್ವ ಹೊಂದಿರುವ ರಾಷ್ಟ್ರಗಳು ಯಾವುವು?
   ಅಮೇರಿಕಾ, ರಷ್ಯಾ, ಚೀನಾ, ಇಂಗ್ಲೇಂಡ್, ಫ್ರಾನ್ಸ್
4. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಸೂಚಿಯಲ್ಲಿರುವ ವಿಷಯಗಳಾವುವು?
   - ಜನಸಂಖ್ಯಾ ಬೆಳವಣಿಗೆಯ ನಿಯಂತ್ರಣ
   - ಪರಿಸರ ಸಂರಕ್ಷಣೆ
   - ಹಸಿವು ಮತ್ತು ಅಪೌಷ್ಟಿಕತೆಯ ನಿರ್ಮೂಲನೆ
5. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಕಾರ್ಯಗಳನ್ನು ಪಟ್ಟಿಮಾಡಿ
   - ಕಾರ್ಮಿಕರಿಗೆ ಸಾಮಾಜಿಕ ಭದ್ರತೆ
   - ಕಾರ್ಮಿಕರಿಗೆ ಆರೋಗ್ಯ ಭದ್ರತೆ
   - ಮಹಿಳಾ ಕಾರ್ಮಿಕರಿಗೆ ಹೆರಿಗೆ ಸೌಲಭ್ಯಗಳು
6. SAARC ನ್ನು ವಿಸ್ತರಿಸಿ
   ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘಟನೆ

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ವಿಶ್ವಸಂಸ್ಥೆಯ ಉದ್ದೇಶಗಳನ್ನು ಪಟ್ಟಿಮಾಡಿ
   - ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ರಕ್ಷಣೆ
   - ರಾಷ್ಟ್ರಗಳ ನಡುವೆ ಸ್ನೇಹ–ಸಂಬಂಧ ಬೆಳೇಸುವುದು
   - ಮೂಲಭೂತ ಮಾನವಹಕ್ಕುಗಳ ಬಗ್ಗೆ ನಂಬಿಕೆಯನ್ನುಂಟು ಮಾಡುವುದು
2. ಸಾಮಾನ್ಯ ಸಭೆಯ ರಚನೆಯನ್ನು ವಿವರಿಸಿ
   - ಸಾಮಾನ್ಯ ಸಭೆಯು ವಿಶ್ವಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿರುತ್ತದೆ
   - ಪ್ರತಿ ಸದಸ್ಯ ರಾಷ್ಟ್ರವು 5 ಪ್ರತಿನಿಧಿಗಳನ್ನು ನೇಮಿಸಬಹುದು
   - ಮೊದಲನೇ ಅಧಿವೇಶನದಲ್ಲಿ 17 ಉಪಾಧ್ಯಕ್ಷರನ್ನು ಆಯ್ಕೆ ಮಾಡಲಾಗುವುದು
3. ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಯ ಚಟುವಟಿಕೆಗಳನ್ನು ತಿಳಿಸಿ
   - ನಿರಾಶ್ರಿತರ ಸಮಸ್ಯೆಯ ನಿರ್ಮೂಲನೆ
   - ಮಾನವಹಕ್ಕುಗಳ ಬಗ್ಗೆ ನಿಗಾ ವಹಿಸುವುದು
   - ವಸತಿ ಸಮಸ್ಯೆಯ ನಿವಾರಣೆ
4. ವಿಶ್ವದ ಶಾಂತಿ ಕಾಪಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರವೇನು?
   - ನಿಶಸ್ತ್ರೀಕರಣ ಸಾದಿಸುವುದು
   - ಕಾಶ್ಮೀರ, ಇರಾನ್, ಕೊರಿಯಾ, ಪಾಲೆಸ್ಟೀನ್ ಇವೇ ಮುಂತಾದ ಸಮಸ್ಯೆಗಳಿಗೆ ಪರಿಹಾರ ನೀಡುವುದು
   - ಶಾಂತಿ ಪಾಲನ ಕಾರ್ಯಗಳು
5. ಯುನೆಸ್ಕೋ ಸಂಸ್ಥೆಯ ಕಾರ್ಯಗಳನ್ನು ತಿಳಿಸಿ
   - ವಿಜ್ಞಾನದ ಪ್ರಸರಣ
   - ವಿಶ್ವ ಪರಂಪರೆಯ ಸ್ಮಾರಕಗಳ ರಕ್ಷಣೆ
   - ಶಿಕ್ಷಣ ಹಾಗೂ ಸಂಸ್ಕೃತಿಯ ಪ್ರಸರಣ
   - ತಾಂತ್ರಿಕ ಶಿಕ್ಷಣದ ಅಭಿವೃದ್ಧಿ
6. ವಿಶ್ವದ ಆರ್ಥಿಕ ಸಮಸ್ಯೆಗಳ ನಿವಾರಣೆಯಲ್ಲಿ ಐ.ಎಂ.ಎಫ್ ನ ಪಾತ್ರವನ್ನು ತಿಳಿಸಿ
   - ಸದಸ್ಯ ರಾಷ್ಟ್ರಗಳಿಗೆ ಸಾಲಗಳನ್ನು ಮಂಜೂರು ಮಾಡುತ್ತದೆ
   - ಪಾವತಿ ಶಿಲ್ಕಿನ ಅಸಮತೋಲನ ನಿವಾರಣೆ ಮಾಡುತ್ತದೆ
   - ಸದಸ್ಯ ರಾಷ್ಟ್ರಗಳಿಗೆ ದೀರ್ಘಾವಧಿ ಸಾಲಗಳನ್ನು ನೀಡುವುದು
7. ಕಾಮನ್‌ವೆಲ್ತ್ ನ ಉದ್ದೇಶಗಳನ್ನು ಪಟ್ಟಿಮಾಡಿ
   - ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವುದು
   - ಬಡತನ ನಿರ್ಮೂಲನೆಗೆ ಸಹಕರಿಸುವುದು
   - ಕ್ರೀಡೆ, ವಿಜ್ಞಾನ, ಸಂಸ್ಕೃತಿಯ ಬೆಳವಣಿಗೆಗೆ ಸಹಕರಿಸುವುದು
   - ಅಂತರರಾಷ್ಟ್ರೀಯ ಸಂಘಟನೆಗಳಿಗೆ ಸಹಕಾರ ನೀಡುವುದು
8. ಯೂರೋಪಿನ ಒಕ್ಕೂಟದ ಬಗ್ಗೆ ಬರೆಯಿರಿ
   - ಯೂರೋಪ್ ಖಂಡದ 21 ರಾಷ್ಟ್ರಗಳ ಒಕ್ಕೂಟ ಇದಾಗಿದೆ
   - ಮ್ಯಾಸ್ಟ್ರಿಚ್ ಒಪ್ಪಂದದ ಅನಸಾರವಾಗಿ 1992 ರಲ್ಲಿ ಸ್ಥಾಪನೆಯಾಯಿತು
   - ಯೂರೋಪಿನಲ್ಲಿ ಸಾಮಾನ್ಯ ಮಾರುಕಟ್ಟೆ ಹಾಗೂ ಏಕ ರೂಪದ ಯೂರೋ ಕರೆನ್ಸಿಯನ್ನು ಜಾರಿಗೆ ತಂದಿದೆ

## IV ಒಂದು ಅಂಕದ ಪ್ರಶ್ನೋತ್ತರಗಳು

1. ಯುನೈಟೆಡ್ ನೇಷನ್ಸ್ (ವಿಶ್ವಸಂಸ್ಥೆ)ಎಂಬ ಪದ ಪರಿಚಯಿಸಿದವರು ಯಾರು?
   ಆಮೇರಿಕಾದ ಆಧ್ಯಕ್ಷ ಪ್ರಾಂಕ್ಲಿನ್–ಡಿ–ರೂಸ್‌ವೆಲ್ಟ್
2. **ಜಾಗತಿಕ ಸಂಸತ್ತು** ಎಂದು ಹೆಸರಾಗಿರುವ ವಿಶ್ವಸಂಸ್ಥೆಯ ಅಂಗ
   ಸಾಮಾನ್ಯ ಸಭೆ
3. ವಿಶ್ವಸಂಸ್ಥೆಯ ದತ್ತಿ ಸಮಿತಿಯ ಕಾರ್ಯವ್ಯಾಪ್ತಿ ಕುಗ್ಗಲು ಕಾರಣವೇನು?
   ದತ್ತಿ ಸಮಿತಿಯ ಆಶ್ರಿತ ಪ್ರದೇಶಗಳ ಸಂಖ್ಯೆ ಕಡಿಮೆ ಆಗುತ್ತಿರುವುದರಿಂದ ಇದರ ಕಾರ್ಯವ್ಯಾಪ್ತಿ ಕುಗ್ಗುತ್ತಿದೆ
4. ವಿಶ್ವಸಂಸ್ಥೆಯ ಸಚಿವಾಲಯದ ಶಾಖೆಗಳಿರುವ ಸ್ಥಳಗಳು ಯಾವುವು?
   ಜಿನೇವಾ, ವಿಯೆನ್ನಾ, ನೈರೋಬಿ,
5. ವಿಶ್ವಸಂಸ್ಥೆಯ ಕಾರ್ಯಾಂಗದ ಮುಖ್ಯಸ್ಥರು ಯಾರು?
   ಮಹಾಕಾರ್ಯದರ್ಶಿ
6. UNDP ವಿಸ್ತರಿಸಿ
   ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೊಗ್ರಾಮ್
7. WHO ವಿಸ್ತರಿಸಿ
   ವಿಶ್ವ ಆರೋಗ್ಯ ಸಂಸ್ಥೆ
8. ವಿಶ್ವ ಆರೋಗ್ಯ ಸಂಸ್ಥೆಯ ಮಹಾನ್ ಸಾಧನೆ ಯಾವುದು?
   ವಿಶ್ವದಾದ್ಯಂತ ಸಿಡುಬು ರೋಗದ ನಿರ್ಮೂಲನೆ
9. ವಿಶ್ವ ಆರೋಗ್ಯ ಸಂಸ್ಥೆಯ ಕೇಂದ್ರ ಕಛೇರಿ ಎಲ್ಲಿದೆ?
   ಸ್ವಿಟ್ಜರ್‌ಲ್ಯಾಂಡಿನ ಜಿನೇವಾ ನಗರದಲ್ಲಿದೆ
10. UNESCO ವಿಸ್ತರಿಸಿ
    ವಿಶ್ವಸಂಸ್ಥೆಯ ಶೈಕ್ಷಣಿಕ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ
11. ಯುನೆಸ್ಕೋದ ಕೇಂದ್ರ ಕಛೇರಿ ಎಲ್ಲಿದೆ ?
    ಫ್ರಾನ್ಸ್ ದೇಶದ ಪ್ಯಾರೀಸ್ ನಗರದಲ್ಲಿದೆ
12. FAO ವಿಸ್ತರಿಸಿ
    ಆಹಾರ ಮತ್ತು ಕೃಷಿ ಸಂಸ್ಥೆ
13. ವಿಶ್ವದ ಬಡತನ ,ಹಸಿವು,ಅಪೌಷ್ಟಿಕತೆ ವಿರುದ್ಧ ಹೋರಾಟ ಮಾಡುತ್ತಿರುವ ಸಂಸ್ಥೆ ಯಾವುದು?
    ಆಹಾರ ಮತ್ತು ಕೃಷಿ ಸಂಸ್ಥೆ
14. UNICEF ವಿಸ್ತರಿಸಿ
    ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳ ತುರ್ತುನಿಧಿ
15. 1965 ರಲ್ಲಿ ನೋಬೆಲ್ ಬಹುಮಾನ ಗಳಿಸಿದ ವಿಶ್ವಸಂಸ್ಥೆಯ ಸೇವಾಘಟಕ ಯಾವುದು
    ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳ ತುರ್ತುನಿಧಿ
16. ಯುನಿಸೆಫ್ ಶುಭಾಶಯ ಪತ್ರಗಳ ಮಾರಾಟದಿಂದ ಬಂದ ಹಣವನ್ನು ಯಾವ ಉದ್ದೇಶಕ್ಕೆ ಬಳಸುತ್ತಿದೆ ?
    ಮಕ್ಕಳ ಯೋಗಕ್ಷೇಮ
17. IMF ವಿಸ್ತರಿಸಿ
    ಅಂತರರಾಷ್ಟ್ರೀಯ ಹಣಕಾಸು ನಿಧಿ
18. ವಿವಿಧ ರಾಷ್ಟ್ರಗಳ ಕೇಂದ್ರಬ್ಯಾಂಕುಗಳ 'ಕೇಂದ್ರಬ್ಯಾಂಕು' ಯಾವುದು?
    ಅಂತರರಾಷ್ಟ್ರೀಯ ಹಣಕಾಸು ನಿಧಿ
19. IBRD ವಿಸ್ತರಿಸಿ
    ವಿಶ್ವಬ್ಯಾಂಕು
20. ವಿಶ್ವಬ್ಯಾಂಕಿನ ಕೇಂದ್ರ ಕಛೇರಿ ಎಲ್ಲಿದೆ?
    ವಾಷಿಂಗ್‌ಟನ್

21. WTO ವಿಸ್ತರಿಸಿ
ವಿಶ್ವ ವ್ಯಾಪಾರ ಸಂಘಟನೆ
22. ಬ್ರಿಟಿಷ್ ವಸಾಹತುಗಳಾಗಿದ್ದ ದೇಶಗಳ ಪ್ರಾದೇಶಿಕ ಸಹಕಾರ ಸಂಘಟನೆಯ ಹೆಸರೇನು?
ಕಾಮನ್‌ವೆಲ್ತ್
23. SAARC ವಿಸ್ತರಿಸಿ
ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘಟನೆ
24. ಸಾರ್ಕ್‌ನ ಕೇಂದ್ರ ಕಛೇರಿ ಎಲ್ಲಿದೆ ?
ನೇಪಾಳ ದೇಶದ ಕಠ್ಮಂಡು ನಗರದಲ್ಲಿದೆ
25. ಸಾರ್ಕ್‌ನ ಪ್ರಗತಿಗೆ ತೊಡಕಾಗಿರುವ ಅಂಶ ಯಾವುದು?
ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೇ ಇರಬೇಕು ಎಂಬ ಸೂತ್ರ
26. ಯೂರೋಪಿಯನ್ ಯೂನಿಯನ್ನಿನ ಕೇಂದ್ರ ಕಛೇರಿ ಎಲ್ಲಿದೆ?
ಮ್ಯಾಸ್ಟ್ರಿಚ್ ನಗರದಲ್ಲಿದೆ.
27. EU ವಿಸ್ತರಿಸಿ
ಯೂರೋಪಿಯನ್ ಯೂನಿಯನ್
28. ASEAN ವಿಸ್ತರಿಸಿ
ಆಗ್ನೇಯ ಏಷ್ಯಾದ ರಾಷ್ಟ್ರಗಳ ಸಂಘಟನೆ
29. ಆಫ್ರಿಕಾದ ಸ್ವತಂತ್ರ ರಾಷ್ಟ್ರಗಳ ಸಂಘಟನೆಯ ಹೆಸರೇನು?
ದಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯೂನಿಟಿ
30. ಸಾರ್ಕ್ ಸ್ಥಾಪನೆಯಾದ ವರ್ಷ ಯಾವುದು?
1985
31. WHO ಸ್ಥಾಪನೆಯಾದ ವರ್ಷ ಯಾವುದು?
1948